## ಕಲೆ ಬದುಕಿನ ಭಾಗವಾಗಲಿ

2  25

**ಶುಭಾ ಧನಂಜಯ,**
ಭರತನಾಟ್ಯ ಕಲಾವಿದೆ,
ಕರ್ನಾಟಕ ಸಂಗೀತ ನೃತ್ಯ
ಅಕಾಡೆಮಿ ಅಧ್ಯಕ್ಷೆ

ನಮ್ಮ ಮನೋವಿಕಾಸವಾಗಲು, ಹೆಚ್ಚು ಪ್ರಜ್ಞಾವಂತರಾಗಲು ಲಲಿತಕಲೆಗಳು ಬೇಕು. ಕರ್ನಾಟಕದ ಮೂಲೆ ಮೂಲೆಯಲ್ಲೂ ಹಲವಾರು ಪ್ರತಿಭಾವಂತ ಕಲಾವಿದರಿದ್ದಾರೆ. ಮಕ್ಕಳೂ ಕಲೆಯಲ್ಲಿ ಚುರುಕಾಗಿದ್ದಾರೆ. ಇಂಥ ಪ್ರತಿಭೆಗಳು ಬೆಳಕಿಗೆ ಬರಬೇಕು. ಲಲಿತಕಲೆಯಿಂದ, ಅದರ ಬೆಳವಣಿಗೆಯಿಂದ ಸಮಾಜದಲ್ಲಿ ಸದ್ಭಾವನೆ ಮೂಡುತ್ತದೆ. ಮಕ್ಕಳಲ್ಲಿ ಹೊಸ ಚಿಂತನೆಗೆ ಅವಕಾಶ ಸಿಗುತ್ತದೆ.

ಕಲೆಯ ಬೆಳವಣಿಗೆಗಾಗಿ ಹೊಸ ವರ್ಷದಲ್ಲಿ ಅನೇಕ ವಿಭಿನ್ನ ಯೋಜನೆಗಳನ್ನು ರೂಪಿಸುವುದು ನಮ್ಮ ಗುರಿ. ಇದು ಸದುಪಯೋಗವಾಗುವಂತೆ ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡು ನಮ್ಮ ಆಶಯ ಈಡೇರುವಂತಾಗಬೇಕು. ಇದು ಡಿಜಿಟಲ್ ಯುಗವಾದರೂ ಮಕ್ಕಳು ಮಿತವಾಗಿ ಸ್ಮಾರ್ಟ್‌ಫೋನ್ ಬಳಸಬೇಕು. ‘ಮೊಬೈಲ್ ಸಂಸ್ಕೃತಿ’ಗೆ ಬಲಿಯಾಗುವ ಬದಲಾಗಿ ಮಕ್ಕಳ ಮನೋವಿಕಾಸಕ್ಕೆ ಪೂರಕವಾದ ಸಂಗೀತ–ನೃತ್ಯ ಶಿಕ್ಷಣವನ್ನು ಪಡೆಯುವುದರಿಂದ ಸಮಾಜ ಸುಸಂಸ್ಕೃತವಾಗಲು ಸಹಕಾರಿಯಾಗುತ್ತದೆ. ಇದಕ್ಕೆ ಪೋಷಕರ ಬೆಂಬಲವೂ ಇರಬೇಕು. ಮಕ್ಕಳು ಕಡ್ಡಾಯವಾಗಿ ಲಲಿತಕಲೆಗಳಲ್ಲಿ, ಓದುವ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳುವಂತೆ ನೋಡಿಕೊಳ್ಳಬೇಕು. ಹೊಸ ವರ್ಷ ನೀರಸ ವರ್ಷವಾಗದೇ ಸದಾ ಲವಲವಿಕೆಯಿಂದ ಇರುವಂತೆ ಆಗಬೇಕು ಎಂಬುದೇ ನನ್ನ ಆಶಯ, ಅಭಿಲಾಷೆ. ಹೊಸ ವರ್ಷದ ಹೊಸತನ ವರ್ಷವಿಡೀ ಇರಲಿ.

2  25

## ಎಲ್ಲೆಲ್ಲು ಸಂಗೀತವೇ...

**ಕೀರ್ತನ್ ಹೊಳ್ಳ,** ಯುವ ಗಾಯಕ

ಮುಂದೆ ಬರುವ ವರ್ಷದಲ್ಲಿ ಸಮಾಜಕ್ಕೆ ಎಲ್ಲ ಕಲಾವಿದರೂ ಸಂಗೀತದ ಮೂಲಕ ಯಾವ ರೀತಿಯಲ್ಲಾದರೂ ಕೊಡುಗೆ ನೀಡಬೇಕು ಎಂಬುದೇ ನನ್ನ ಮೊದಲ ಆಶಯ. ಸಂಗೀತ ಆಸ್ವಾದಿಸಲು ಹೆಚ್ಚು ಹೆಚ್ಚು ಕಿವಿಗಳು ಸೃಷ್ಟಿಯಾಗಬೇಕು. ಮೊದಲಿಗೆ ಒಳ್ಳೆಯ ಕೇಳುಗರಾಗಬೇಕು, ಶಾಸ್ತ್ರೀಯ ಸಂಗೀತವನ್ನು ಕೇಳುವ ಅಭಿರುಚಿ ಹೆಚ್ಚಬೇಕು. ಅದು ಹಿಂದೂಸ್ತಾನಿಯೇ ಇರಲಿ, ಕರ್ನಾಟಕ ಸಂಗೀತವೇ ಇರಲಿ. ಸಿನಿಮಾ ಸಂಗೀತವನ್ನೂ ಕೇಳಬೇಕು. ಎಲ್ಲವನ್ನೂ ಬ್ಯಾಲೆನ್ಸ್ ಆಗಿ ಕೇಳಬೇಕು. ನಮ್ಮ ಬೇರುಗಳನ್ನು ನಾವು ಮರೆಯದೇ ಅದನ್ನು ನೀರೆರೆದು ಪೋಷಿಸಬೇಕು, ಬೆಳೆಸಬೇಕು, ಇದನ್ನು ಮುಂದಿನ ಪೀಳಿಗೆಗೂ ಮುಂದುವರಿಯುವ ಹಾಗೆ ಮಾಡಬೇಕು.

ಮಕ್ಕಳಲ್ಲಿ ಸಂಗೀತ ರುಚಿವರ್ಧನೆ ಆಗಬೇಕು. ಕಲಿಕೆ ತುಂಬ ಮುಖ್ಯ. ಇಂದಿನ ಜಂಜಾಟದಿಂದ ಕಲಿಕೆಯ ಮಟ್ಟ ಕಡಿಮೆಯಾಗ್ತಾ ಇದೆ ಅನಿಸ್ತಾ ಇದೆ. ಕಲಿತಾ ಇರಬೇಕು. ಎಲ್ಲ ತರಹದ ಸಂಗೀತ ಕೇಳಿ ನಮ್ಮ ಪರಂಪರೆಯನ್ನು ಬಿಟ್ಟುಕೊಡಬಾರದು. ಮಕ್ಕಳೆಲ್ಲ ಸಂಗೀತದ ಭದ್ರ ಬುನಾದಿ ಹಾಕಿಕೊಂಡರೆ ಮುಂದಿನ ಪೀಳಿಗೆ ಹೆಚ್ಚು ಸುಸಂಸ್ಕೃತವಾಗುತ್ತದೆ. ಎಲ್ಲವೂ ‘ಪ್ರೋಗ್ರೆಸಿವ್ ವೇ’ಯಲ್ಲೇ ನಡೆಯಬೇಕು ಎಂಬುದೇ ಹೊಸ ವರ್ಷದ ಹೊಸ್ತಿಲಲ್ಲಿ ನನ್ನ ಆಶಯ. ಹ್ಯಾಪಿ ಮ್ಯೂಸಿಕಲ್ ನ್ಯೂ ಇಯರ್!

## ಹೊಸ ಭರವಸೆ ಮೂಡಲಿ

2  25

**ಬಿ. ರಾಜಶೇಖರಮೂರ್ತಿ,**
ಸಾಮಾಜಿಕ ಕಾರ್ಯಕರ್ತ

ಹೊಸ ವರ್ಷಕ್ಕೆ ಕೇಕ್ ತಿಂದು ಸಂಭ್ರಮಿಸುತ್ತಿದ್ದ ನನಗೆ ಕ್ರಮೇಣ ಕ್ಯಾಲೆಂಡರ್‌ಗಳಷ್ಟೇ ಬದಲಾಗುತ್ತಿವೆ, ಜನರ ಜೀವನದಲ್ಲಿ ಯಾವ ಬದಲಾವಣೆಗಳು ಕಾಣುತ್ತಿಲ್ಲವಲ್ಲ ಅನ್ನಿಸುತ್ತಿದೆ. ಸಾಮಾಜಿಕ ಕಾರ್ಯಕರ್ತನಾಗಿ, ದುಡಿಯುವ ವರ್ಗದ ಬದುಕು–ಬವಣೆಯನ್ನು ಅನುಭವಿಸಿ ಬಂದವನು ನಾನು.

ಬಡತನದ ಬಾಳು ‘ಉಳ್ಳವರು ಶಿವಾಲಯ ಮಾಡುವರು, ನಾನೇನು ಮಾಡಲಿ ಬಡವನಯ್ಯ’ ಎನ್ನುವಂತಾಗಿದೆ. ದೇಶದ ಶೇ. 40ರಷ್ಟು ಸಂಪತ್ತು ಕೇವಲ ಶೇ. 1ರಷ್ಟು ಮಂದಿ ಕೈಯಲ್ಲಿದ್ದರೆ, ಉಳಿದ ಶೇ. 60ರಷ್ಟು ಸಂಪತ್ತು ಶೇ. 99ರಷ್ಟು ಜನರ ಕೈಯಲ್ಲಿದೆ. ಈ ಅಸಮಾನ ವ್ಯವಸ್ಥೆ ದೇಶದ ಬಡತನ ಮತ್ತು ಅನಾರೋಗ್ಯಕ್ಕೂ ಕಾರಣ. ಮಹಿಳೆಯರ ಮೇಲೆ ದೌರ್ಜನ್ಯ ದಿನನಿತ್ಯ ಕಾಡುತ್ತಿದೆ. ಹೊಸವರ್ಷದಲ್ಲಿ ಇವ್ಯಾವೂ ಬದಲಾಗುವುದಿಲ್ಲ.

ನಮ್ಮ ದೇಶ ಉಳ್ಳವರು ಮತ್ತು ಇಲ್ಲದವರ ನಡುವೆ ಕವಲಾಗಿರುವ ಸಮಕಾಲೀನ ಸಂದರ್ಭದಲ್ಲಿ, ನಾನು ದಮನಿತರ ಧ್ವನಿಯಾಗಿ ಇನ್ನಷ್ಟು ಬದ್ಧತೆಯಿಂದ, ದುಡಿಯುವ ಜನರ ಏಳ್ಗೆಗಾಗಿ ತೊಡಗಿಸಿಕೊಳ್ಳಲು ಮುಂದಾಗುತ್ತೇನೆ. ನಮ್ಮ ಸಂವಿಧಾನ ಪೀಠಿಕೆಯಲ್ಲಿ ಹೇಳಿರುವಂತೆ ‘ಭಾರತದ ಎಲ್ಲಾ ಪ್ರಜೆಗಳಿಗೆ ಸಾಮಾಜಿಕ–ಆರ್ಥಿಕ–ರಾಜಕೀಯ ನ್ಯಾಯ’ ರೂಪಿಸಿಕೊಳ್ಳುವುದಕ್ಕಾಗಿ ಎಂಬುದನ್ನು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವಂತಹ ಜನ ಚಳವಳಿಯಲ್ಲಿ ಹೆಚ್ಚೆಚ್ಚು ತೊಡಗಿಸಿಕೊಳ್ಳುವಂತೆ ಹೊಸ ವರ್ಷದ ಸಂದರ್ಭದಲ್ಲಿ ಸಂಕಲ್ಪ ಮಾಡಿಕೊಳ್ಳುತ್ತೇನೆ.

‘ಬಾಬ್ ಮಾರ್ಲೆ ಫ್ರಮ್ ಕೋಡಿಹಳ್ಳಿ’ ನಾಟಕದಲ್ಲಿ ನದಿ ಕೇಳುವ ಮಾತಿದು. ಇದೊಂದು ಪ್ರಶ್ನೆಯಿಂದ ಹೊಸ ಕಾಲದ ಎಲ್ಲ ತಲ್ಲಣಗಳಿಗೂ ದನಿಯಾಗುತ್ತಾಳೆ ನದಿ. ಎಲ್ಲೆಲ್ಲಿಯೂ ಕತ್ತಲೆಯೇ ಮೇಳೈಸಿರುವಾಗಲೂ ಅದೇ ಕತ್ತಲೆಯನ್ನು ದಿಟ್ಟಿಸಿ ನೋಡುವ ಗಟ್ಟಿಗಿತ್ತಿ ಇವಳು. ತನ್ನ ಚೈತನ್ಯದಿಂದಲೇ ಸ್ಫೂರ್ತಿ ತುಂಬುವವಳು.

ಚೆಸ್ ಆಟದಲ್ಲಿ ವಿಶ್ವ ಚಾಂಪಿಯನ್‌ಶಿಪ್ ಗೆದ್ದ ಗುಕೇಶ್ ದೊಮ್ಮರಾಜು, ಟ್ವೆಂಟಿ20 ವಿಶ್ವಕಪ್ ಗೆದ್ದ ಟೀಮ್ ಇಂಡಿಯಾ, ಅಷ್ಟೇ ಏಕೆ... ಅನಾಮಧೇಯ ನಾಟಕವೊಂದರ ಪಗಡೆಯಾಟದಲ್ಲಿ ಯುಧಿಷ್ಠಿರ ಗೆಲ್ಲುತ್ತಲೇ ಹೋದ ವಿಧಿಯಲ್ಲೂ ಇಂಥದೇ ಸ್ಫೂರ್ತಿಯ ಚಿಲುಮೆಯಿದೆ.

***

ಚಿಕ್ಕವಳಿದ್ದಾಗ ನಮ್ಮ ಮನೆಯಲ್ಲಿ ಒಂದು ಬೊಂಬೆಯಿತ್ತು. ಆಲದ ಮರದ ಕೆಳಗೆ ಪ್ರಶಾಂತ ಮಂದಹಾಸ ಹೊತ್ತು ಕುಳಿತ ಬುದ್ಧನ ಮೂರ್ತಿ. ಗೋಕರ್ಣದ ಶಿವರಾತ್ರಿ ಜಾತ್ರೆಯಿಂದ ನನ್ನ ತಂದೆ ಅದನ್ನು ತಂದಿದ್ದರು. ಎಷ್ಟೋ ಕಾಲ ಆ ಬೊಂಬೆ ಮನೆಯ ಟೀವಿ ಟೇಬಲ್ಲಿನ ಮೇಲೆ ನಿಶ್ಚಲವಾಗಿ ಕುಳಿತಿತ್ತು. ಟೀವಿಯ ಸ್ವಿಚ್ಚು ಹಾಕಲು ಹೋದಾಗಲೆಲ್ಲ ಧ್ಯಾನಕ್ಕೆ ಕುಳಿತ ಬುದ್ಧನ ಪ್ರಸನ್ನತೆಗೆಲ್ಲಿ